# <u>ಕ್ರಿಮಿನಲ್ ಮಿಸ್.ನಂ.231/2018</u>

ದಿನಾಂಕಃ07-09-2019 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಿ.ಡಬ್ಲ್ಯುಃ1

**<u>ಪಾಟೀ ಸವಾಲುಃ ಶ್ರೀಮತಿ ಹೆಚ್.ವಿ.ಜಿ. ವಕೀಲರಿಂದಃ</u>**

ಮದುವೆ ಆಗಿ ಮೂರೂವರೆ ವರ್ಷಗಳಾಗಿವೆ. ಮದುವೆಯಾದ ಒಂದೂವರೆ ವರ್ಷಗಳ ಕಾಲ ನನ್ನ ಗಂಡನ ಮನೆಯಲ್ಲಿ ಇದ್ದೆ. ಎದುರುದಾರರ ಮನೆಯಲ್ಲಿ ನಾನು ಕೇವಲ 3 ತಿಂಗಳು ಮಾತ್ರ ಇದ್ದೆ ಅಂದರೆ ಸರಿಯಲ್ಲ. ನನ್ನ ತಂದೆ ಕೂಲಿ ಕೆಲಸ ಮಾಡುತ್ತಾರೆ. ನನ್ನ ತಂದೆಗೆ ಆಸ್ತಿಗಳು ಇರುವುದಿಲ್ಲ ಅಂದರೆ ಸರಿ, ಸಾಕ್ಷಿ ಮುಂದುವರಿದು ಅವರೂ ಸಹ ಕೂಲಿ ಮಾಡಿ ಬದುಕುತ್ತಾರೆ ಎಂದು ನುಡಿಯುತ್ತಾರೆ. ಅರ್ಜಿಯ 2 ನೇ ಪ್ಯಾರಾದಲ್ಲಿ ಹೇಳಿರುವಂತೆ ಹಣ ಹಾಗೂ ಒಡವೆಗಳನ್ನು ನಿಮ್ಮ ತಂದೆಗೆ ಶಕ್ತಿ ಇರಲಿಲ್ಲ ಅಂದರೆ, ಸಾಕ್ಷಿ ನಿವೇಶನವನ್ನು ಮಾರಿ ಬಂದ ಹಣದಿಂದ ಎಲ್ಲವನ್ನು ನೀಡಿ ಮದುವೆ ಮಾಡಿಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ.

ನನ್ನ ಗಂಡ ಎದುರುದಾರ ಪಿಯುಸಿ ವ್ಯಾಸಂಗ ಮಾಡಿರುತ್ತಾರೆ. ಆತ ಎಸ್.ಎಸ್.ಎಲ್.ಸಿ. ಮಾತ್ರ ಓದಿದ್ದಾರೆ ಎಂದು ಕೇಳಲಾದ ಪ್ರಶ್ನೆಗೆ ಸಾಕ್ಷಿ ಆತ ನನಗೆ ಪಿಯುಸಿ ಓದಿರುವುದಾಗಿ ತಿಳಿಸಿದ್ದರು ಎಂದು ನುಡಿಯುತ್ತಾರೆ. ಅರ್ಜಿಯ ಶೀರ್ಷಿಕೆಯಲ್ಲಿ ತೋರಿಸಿರುವ 'ಬೀರಲಿಂಗೇಶ್ವರ ಕಿರಾಣಿ ಅಂಗಡಿ' ಚಿಕ್ಕದಾದ ಅಂಗಡಿ ಅಂದರೆ, ಸಾಕ್ಷಿ ದೊಡ್ಡದಾದ ಕಿರಾಣಿ ಅಂಗಡಿ ಎಂದು ನುಡಿಯುತ್ತಾರೆ. ನಾನು ಹಾಜರುಪಡಿಸಿರುವ ಪಹಣಿಗಳಲ್ಲಿ ನಮೂದು ಮಾಡಿರುವ ಆಸ್ತಿಗಳು ನನ್ನ ಮಾವನ ಒಟ್ಟು ಕುಟುಂಬದ ಆಸ್ತಿಗಳು ಅಂದರೆ ಸರಿ. ನನ್ನ ಮಾವನ ಹೆಸರು ನಾರಾಯಣ ಬಿನ್ ನಿಂಗಪ್ಪ ಅಂದರೆ ಸರಿ. ನಾನು ಹಾಜರುಪಡಿಸಿರುವ ಪಹಣಿಯಲ್ಲಿ ತೋರಿಸಿರುವ ಅಷ್ಟೂ ಆಸ್ತಿಗಳು ನನ್ನ ಮಾವನ ಅಣ್ಣನ ಮಗನಾದ ಶಿವಣ್ಣನಿಗೆ ಸೇರಿದ್ದು ಅಂದರೆ ಸರಿಯಲ್ಲ. ನಿಪಿ-6 ಮತ್ತು ನಿಪಿ-8 ನಾರಾಯಣ ಬಿನ್ ಶಿವಣ್ಣ ಎಂಬುವವರ ಹೆಸರಿನಲ್ಲಿದೆ ಅಂದರೆ ಸರಿ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ಅರ್ಜಿಯ ಕಾಲಂ.4 ರಲ್ಲಿ ಹೇಳಿರುವ ಆಸ್ತಿಗಳು ಮದುವೆಗು ಮುಂಚೆ ಇದ್ದು, ಅದು ಈಗ ನಿಮ್ಮ ಮಾವನ ಹೆಸರಿನಲ್ಲಿ ಇರುವುದಿಲ್ಲ ಅಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಕೇಳಿರುವಂತೆ ಎದುರುದಾರರಿಗೆ ಆದಾಯ ಇದೆ ಅಂದರೆ ಸರಿಯಲ್ಲ ಮತ್ತು

ಎದುರುದಾರರಿಗೆ ವಾರ್ಷಿಕ ರೂ.25 ಲಕ್ಷ ಆದಾಯ ಇರುವುದಿಲ್ಲ ಅಂದರೆ ಸರಿಯಲ್ಲ. ಎದುರುದಾರರು ನನಗೆ ಜೀವನಾಂಶವನ್ನು ಕೊಡಲು ಬಾಧ್ಯಸ್ಥರಲ್ಲ ಅಂದರೆ ಸರಿಯಲ್ಲ. ಮದುವೆಗೂ ಮೊದಲೇ ನನಗೆ ಮಾನಸಿಕ ಖಾಯಿಲೆ ಇತ್ತು ಅಂದರೆ ಸರಿಯಲ್ಲ. ಎದುರುದಾರರು ನನಗೆ ಮಾನಸಿಕ-ದೈಹಿಕವಾಗಿ ಕಿರುಕುಳ ನೀಡಿದ್ದಾರೆ ಎನ್ನಲಾಗಿದೆ ಎನ್ನುವ ಬಗ್ಗೆ ನಾನು ಪೋಲೀಸರಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ಅರ್ಜಿಯಲ್ಲಿ ಹೇಳಿರುವಂತೆ ನನಗೆ ಯಾವುದೇ ಕಿರುಕುಳ ಕೊಟ್ಟಿರುವುದಿಲ್ಲ ಮತ್ತು ಅವರು ನನ್ನ ಮೇಲೆ ನಿರ್ಲಕ್ಷ್ಯತನ ತೋರಿರುವುದಿಲ್ಲ ಅಂದರೆ ಸರಿಯಲ್ಲ. ಅರ್ಜಿಯಲ್ಲಿ ಕೇಳಿರುವಂತೆ ಪರಿಹಾರ ಹೊಂದಲು ನಾನು ಅರ್ಹಳಲ್ಲ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಸಿ.ಎನ್.ಚಂದನ್)
ಪ್ರಃಪ್ರಃದಃನ್ಯಾಃದಂ.,ರವರು, ಕಡೂರು.